# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಕರ್ನಾಟಕ ರಾಜ್ಯದಲ್ಲಿರುವ ಜೈನ್ ದೇವಾಲಯ (ಬಸದಿ)ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಸಹಾಯಾನುಧನ ಬಿಡುಗಡೆ ಮಾಡುವ ಬಗ್ಗೆ ಮಾರ್ಗಸೂಚಿಗಳು

**ಓದಲಾಗಿದೆ:**
1. 2015-16ನೇ ಸಾಲಿನ ಆಯವ್ಯಯ ಭಾಷಣ,
2. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಏಕಕಡತ ಸಂಖ್ಯೆ: ಅಸಂನಿ/ ಜೈನ್/ಸಿಆರ್-15/2015-16 ದಿನಾಂಕ:22-05.2015.

<><><>

**ಪ್ರಸ್ತಾವನೆ:-**

2015-16ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ-252 ರಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿನ ಜೈನ್ ದೇವಾಲಯ (ಬಸದಿ)ಗಳ ಜೀರ್ಣೋದ್ಧಾರಕ್ಕೆ ರೂ.2.00ಕೋಟಿ ಅನುದಾನ ಒದಗಿಸಲಾಗುವುದು ಎಂದು ಘೋಷಿಸಲಾಗಿದೆ.

ಅದರಂತೆ, ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರು ಮೇಲೆ(2)ರಲ್ಲಿ ಓದಲಾದ ಏಕಕಡತದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಜೈನ್ ದೇವಾಲಯ (ಬಸದಿ) ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಸಹಾಯಾನುಧನ ಬಿಡುಗಡೆ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅದರಂತೆ, ಜೈನ್ ದೇವಾಲಯ (ಬಸದಿ)ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡಲು ಪ್ರತ್ಯೇಕ ಮಾರ್ಗಸೂಚಿಗಳನ್ನು ರಚಿಸುವುದು ಅಗತ್ಯ ಮತ್ತು ಅಪೇಕ್ಷಣೀಯವಾಗಿದೆ ಎಂದು ಕಂಡು ಬಂದು, ಈ ಸಂಬಂಧ ಸಹಾಯಾನುದಾನ ಮಂಜೂರುಮಾಡಲು ಮಾರ್ಗಸೂಚಿಗಳನ್ನು ರೂಪಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: MWD 174 MDS 2015, ಬೆಂಗಳೂರು, ದಿನಾಂಕ:23-09-2015**

ಕರ್ನಾಟಕ ರಾಜ್ಯದಲ್ಲಿನ ಜೈನ್ ದೇವಾಲಯ (ಬಸದಿ)ಗಳಿಗೆ ಸಂಬಂಧಿಸಿದಂತೆ ಸಹಾಯಾನುದಾನ ಮಂಜೂರು ಮಾಡುವ ಬಗ್ಗೆ ಈ ಯೋಜನೆಯನ್ನು ಜಾರಿಗೆ ತರಲು ಈ ಆದೇಶಕ್ಕೆ **"ಅನುಬಂಧ-ಎ"** ರಲ್ಲಿ ಲಗತ್ತಿಸಿರುವ ಮಾರ್ಗಸೂಚಿಗಳೊಂದಿಗೆ ಮಂಜೂರಾತಿ ನೀಡಲಾಗಿದೆ.

ಈ ಮಾರ್ಗಸೂಚಿಗಳು ತಕ್ಷಣದಿಂದ ಜಾರಿಗೆ ಬರುತ್ತವೆ. ಈ ಯೋಜನೆಗೆ ತಗಲುವ ವೆಚ್ಚವನ್ನು 2015-16ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:2225-03-277-2-82 **"ಜೈನ್ ಸಮುದಾಯದ ಅಭಿವೃದ್ಧಿ"** ಅಡಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು, ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನ ಕೋರತಕ್ಕದ್ದಲ್ಲ.

.......2

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಅಇ731 ವೆಚ್ಚ-3/2015 ದಿ: 07-08-2015 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 49 ಐಎಂಎಂ 2015 ದಿ:27-06-2015 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ನಾಗರತ್ನ)
ಸರ್ಕಾರದ ಉಪ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

**ಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಈ ಆದೇಶವನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವಂತೆ ಹಾಗೂ ಈ ಇಲಾಖೆಗೆ 200 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

**ಪ್ರತಿ:-**

1. ಮಹಾಲೇಖಪಾಲರು(ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ. 20ನೇ ಮಹಡಿ, ವಿ.ವಿ. ಗೋಪುರ, ಬೆಂಗಳೂರು.
4. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್,
6. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ ಇಲಾಖೆ, ವಿ.ವಿ.ಗೋಪುರ, ಡಾ:ಅಂಬೇಡ್ಕರ್ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಯೋಜನಾ ಇಲಾಖೆ ಪಿಎಂಐ ವಿಭಾಗ ಬಹುಮಹಡಿ ಕಟ್ಟಡ ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3) ವಿಧಾನಸೌಧ ಬೆಂಗಳೂರು.
9. ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು
10. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.(ನಿರ್ದೇಶಕರ ಮುಖಾಂತರ)
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

......3

# "ಅನುಬಂಧ-ಎ"

**ಸರ್ಕಾರಿ ಆದೇಶ ಸಂಖ್ಯೆ: MWD 174 MDS 2015, ಬೆಂಗಳೂರು, ದಿನಾಂಕ:10-09-2015ಕ್ಕೆ**

**ಕರ್ನಾಟಕ ರಾಜ್ಯದಲ್ಲಿರುವ ಜೈನ್ ದೇವಾಲಯ (ಬಸದಿ) ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಸಹಾಯಾನುದಾನ ಬಿಡುಗಡೆ ಮಾಡಲು ಮಾರ್ಗಸೂಚಿಗಳು:-**

ಕರ್ನಾಟಕ ರಾಜ್ಯಾದ್ಯಂತ ಜೈನ್ ಅಲ್ಪಸಂಖ್ಯಾತರ ಸಮುದಾಯವನ್ನು ಪ್ರೋತ್ಸಾಹಿಸುವ ಉದ್ದೇಶದಲ್ಲಿ ಜೈನ್ ದೇವಾಲಯ(ಬಸದಿ)ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಕೈಗೊಳ್ಳುವುದರ ಮೂಲಕ ಧಾರ್ಮಿಕ ಸ್ವತ್ತುಗಳ ಸಂರಕ್ಷಣೆಗಾಗಿ ಮತ್ತು ಉತ್ತಮ ಸ್ಥಿತಿಯಲ್ಲಿ ಕಾಪಾಡುವುದು ಅಗತ್ಯವೆಂದು ಕಂಡು ಬಂದಿದೆ. ಮತ್ತು ಈ ಉದ್ದೇಶಕ್ಕಾಗಿ ಅರ್ಹ ಜೈನ್ ದೇವಾಲಯ (ಬಸದಿ) ಗಳಿಗೆ ಸಹಾಯಾನುದಾನವನ್ನು ನೀಡಲು ರಾಜ್ಯದ ಆಯವ್ಯಯದಲ್ಲಿ ಅನುದಾನ ನಿಗಧಿಪಡಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಇಚ್ಚೆಯುಳ್ಳ ಜೈನ್ ದೇವಾಲಯ(ಬಸದಿ)ಗಳ ವ್ಯವಸ್ಥಾಪನ/ಜೀರ್ಣೋದ್ಧಾರ ಸಮಿತಿಯವರು ಅನುದಾನ ಪಡೆಯಲು ಮುಂದೆ ಬಂದಲ್ಲಿ ಅಂಥಹ ದೇವಾಲಯ/ಬಸದಿಗಳಿಗೆ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡ ಅರ್ಹತೆಯನ್ನು ಹೊಂದಿರಬೇಕು.

**ಅರ್ಹತೆಗಳು:-**

1. ನಿಗಧಿತ ನಮೂನೆಯಲ್ಲಿ ಅರ್ಜಿ (ನಮೂನೆ-1).
2. ದೇವಾಲಯ /ಸಂಸ್ಥೆಯ ನೊಂದಣಿ ಪ್ರಮಾಣ ಪತ್ರ (ಭಾರತೀಯ ನ್ಯಾಸ ಅಧಿನಿಯಮ ಅಥವಾ ಕರ್ನಾಟಕ ಸಂಘ ಸಂಸ್ಥೆಗಳ ನೊಂದಣಿ ಅಧಿನಿಯಮದ ಮೇರೆಗೆ ನೊಂದಾವಣೆಯಾಗಿರಬೇಕು ಅಥವಾ ಸಂಬಂಧಪಟ್ಟ ತಾಲ್ಲೂಕಿನ ತಹಸಿಲ್ದಾರರಿಂದ ದೇವಾಲಯ/ಬಸದಿ ಇರುವ ಬಗ್ಗೆ ಪ್ರಮಾಣ ಪತ್ರ. ಸಲ್ಲಿಸಬೇಕು). (ನಮೂನೆ-2)
3. ಒಂದು ವರ್ಷದ ಆಡಿಟ್ ರಿಪೋರ್ಟ (ಚಾರೆಟ್ಡ್ ಅಕೌಂಟೆಂಟ್ ರಿಂದ ತಯಾರಿಸಿರಬೇಕು) ವಾರ್ಷಿಕ ಲೆಕ್ಕ ಪತ್ರ ವರದಿ.
4. ಅಂದಾಜು ಪಟ್ಟಿ. (ದೇವಸ್ಥಾನದ ವ್ಯಾಪ್ತಿಗೆ ಬರುವ ಸ್ಥಳೀಯ ಸರ್ಕಾರಿ ಅಭಿಯಂತರರು ಅಥವಾ ಇತರೆ ಅನುಮೋದಿತ ಅಭಿಯಂತರರು).
5. ದೇವಾಲಯ/ವ್ಯವಸ್ಥಾಪನಾ ಸಮಿತಿ ಹೆಸರಿನಲ್ಲಿ ನಿವೇಶನ ಪತ್ರ.
6. ದೇವಾಲಯ ಆಡಳಿತಕ್ಕೆ ವಿದ್ಯುಕ್ತವಾಗಿ ಚುನಾಯಿತಗೊಂಡ ಆಡಳಿತ ಮಂಡಳಿ ಪಟ್ಟಿ.
7. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಸ್ಥಳ ತನಿಖಾ ವರದಿ. (ನಮೂನೆ-3)
8. ದೇವಾಲಯದ ಛಾಯಾ ಚಿತ್ರಗಳನ್ನು ಹಿಂಬದಿಯಲ್ಲಿ ಜಿಲ್ಲಾ ಅಧಿಕಾರಿಗಳು ಧೃಡೀಕರಿಸಿರಬೇಕು
9. ಮುಚ್ಚಳಿಕೆ ಪತ್ರ
10. ಈ ಯೋಜನೆಯಡಿ ಅನುದಾನ ಪಡೆಯುವ ದೇವಾಲಯ /ಬಸದಿ ಮುಜಾರಾಯಿ ಇಲಾಖೆಯಿಂದ ಇದೇ ಉದ್ದೇಶಕ್ಕೆ ಅನುದಾನ ಪಡೆಲಾಗಿದೆಯೇ/ಇಲ್ಲವೇ ಎಂಬ ಬಗ್ಗೆ ಸ್ಥಳೀಯ ತಹಸಿಲ್ದಾರ ಕಛೇರಿಯಿಂದ ದೃಢೀಕರಣ ಪಡೆದು ಸಲ್ಲಿಸುವುದು.

**ಅನುದಾನದ ವಿವರ:-**

1) ಅನುದಾನ ಲಭ್ಯತೆಯನ್ನಾಧರಿಸಿ ಪ್ರತಿ ಜೈನ್ ದೇವಾಲಯ(ಬಸದಿ)ಗೆ ಅಂದಾಜು ವೆಚ್ಚದ ಶೇ.50%ರಷ್ಟು ಅಥವಾ ಗರಿಷ್ಠ ರೂ 10.00 ಲಕ್ಷ ಯಾವುದು ಕಡಿಮೆಯೂ ಅನುದಾನ.

.......4